ಮೈಸೂರ ಗೆಜೆಟ್.

ನಂ. XXXVIII] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 26.

ಬೆಂಗಳೂರು, ಗುರುವಾರ, ಜುಲೈ ತಾ॥ 2, ಸ॥ 1903.

IIನೇ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಜೇಫ್ ಜಡ್ಜ್‌ರು ಮಗ್ಗೆರೆಂದ ಕೊಡೋಕ್ಷಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್ನಾಮೆ.

ನೋಟೀಸು ತಾರೀಖು 13ನೇ ಜೂ॥ 1903ನೇ ಇಸವಿ.

ಮೈಸೂರು ಗೆಜೆಟ್ IIನೇ ಭಾಗ 588ನೇ ಪುಟದಲ್ಲಿ ಇರುವ 26—4—03ನೇ ಮಜ್ಕೂರ್ ನೋಟಿಫಿಕೇಷನ್ ಅನುಸರಿಸಿ ಈ ಕೆಳಗೆ ನಮೂದಿಸಿರುವ ತಾಲ್ಲೂಕ್‌ಗಳ ಸರ್ಕಾರಿ ಬಂಜರು ಜಮೀನುಗಳಲ್ಲಿರುವ (ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಸ್) ಆವರಿಕೆ ಮತ್ತು ಕಕ್ಕೆ ಚಕ್ಕೆ ಜವಾಯಿಸುವ ಹಕ್ಕನ್ನು ಎರಡು ವರುಷಗಳಿಗೆ ಅಂದರೆ 1903ನೇ ಆಗಸ್ಟ್ 1ರ ಲಾಗಾಯಿತು 1905ನೇ ಜೂ॥ 30ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜುಲೈ 21ನೇ ತಾರೀಖಿನಲ್ಲಿ ಮಧ್ಯಾಹ್ನ 2 ಘಂಟೆಗೆ ಹರಾಜು ಮಾಡಲ್ಪಡುತ್ತೆ.

(1) ಹೆಗ್ಗಡದೇವನಕೋಟೆ	(4) ಹುಣಸೂರು
(2) ಗುಂಡ್ಲುಪೇಟೆ	(5) ಯಡತೊರೆ
(3) ನಂಜನಗೂಡು	(6) ಚಾಮರಾಜನಗರ

ಷರತ್ತು:—ಮೇಲೆ ನಮೂದಿಸಿರುವ 26—4—03ನೇ ಮ॥ ನೋಟಿಫಿಕೇಷನ್ ನೋಡಿ.

ಸಿ ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಮೊಕ್ಕಾಂ ಮುತ್ತೋಡಿ, ತಾರೀಖು 22ನೇ ಜೂ॥ 1903.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ತರೀಕೆರೆ ತಾಲ್ಲೂಕು ಲಿಂಗದಹಳ್ಳಿ ಹೋಬಳಿ ಹುಲಿತಿಮ್ಮಾಪುರದ ಊರು ಮುಂದೆ ಈ ಮಾರ್ಜಿನಲ್ಲಿ ಕಂಡ ಅಳತೆವುಳ್ಳ 2 ಮತ್ತಿ ನಾಟಾಗಳು ಬಿದ್ದು ಇವ್ವೆ. ಇದಕ್ಕೆ ವಾರಿಸ್‌ದಾರ್ರು ಇಂಥಾವರೆಂಬುವದು ಗೊತ್ತಿಲ್ಲವೆಂದು ಲಕ್ಕವಳ್ಳಿ ರೇಂಜು ಫಾರೆಸ್ಟ್ ಆಫಿಸರವರು 693—28—5—03ನೇ ರಿಪೋರ್ಟು ಮೂಲಕ ತಿಳುಸುತ್ತಾರೆ. ಈ ನಾಟಾಗಳ ಬಾಧ್ಯಸ್ಥರ್ಯಾರಾದರೂ ಇದ್ದ ಪಕ್ಷದಲ್ಲಿ ಅಂಥಾವರು ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಈ ಬಗ್ಗೆ ತಮ್ಮಲ್ಲಿರತಕ್ಕ ಸಾಧನೆಗಳಿಸಿ ನಮ್ಮ ರೂಬರೂಬು ಹಾಜರಾಗಿ ಮನವೇ ಮಾಡಿಕೊಳ್ಳಬೇಕು. ಆ ಪ್ರಕಾರ ವಾಯಿದೇಲಿ ಹಾಜರಾಗಿ ತಮ್ಮ ಹಕ್ಕು ಬಾಧ್ಯತೆ ಸ್ಥಿರಪಡಿಸಿಕೊಳ್ಳದೆ ಇದ್ದಲ್ಲಿ ಸ॥ 1900ನೇ ಇಸವಿ XIನೇ ನಂಬರು ಫಾರೆಸ್ಟ್ ರೆಗ್ಯುಲೇಷನ್ 42ನೇ ಸೆಕ್ಷನ್ ಅನುಸರಿಸಿ ಹರಾಜು ಮಾಡಿಸಲ್ಪಡುತ್ತೆ. ನಂತರ ತರುವ ತಕರಾರು ಅಂಗೀಕರಿಸುವದಿಲ್ಲ ತಿಳಿಯುವದು.

ನಂ.	ಜಾತಿ.	ಲಾಂಬಿ.	ಸುತ್ತು
1.	ಮತ್ತಿ	14—0	4—7
2.	ಮತ್ತಿ	15—6	4—3

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ಕೊಡಗು ಫಾರೆಸ್ಟ್ಸ್ ಇಲಾಖಾ.

ನೋ ಟಿ ಸ್ .

ಕರೀಮರದ ಮಾರಾಟ.

ಮಲಬಾರು ಜಿಲ್ಲಾ ಚಿವಿಯಾಪಟ್ಣದಲ್ಲಿ ಈಗ ಜಮಾಯಿಸಿ ನಿಟ್ಟಿರುವ ಹೆಚ್ಚು ಕಡಿಮೆ 1100 ಕ್ಯೂಬಿಕ್ ಫೂಟು ಉಳ್ಳ 5 ಲಾಟು ಸಾಧಾರಣ ಕೆತ್ತಿರುವ ಕರೀ ಮರವನ್ನು ಕೊಂಡುಕೊಳ್ಳುವ ಬಗ್ಗೆ 1903ನೇ ಇಸವಿ ಆಗಸ್ಟ್ಟು ತಾರೀಖು 1ನೇ ವರೆಗೆ ದರಖಾಸ್ತುಗಳು ತೆಗದುಕೊಳ್ಳಲ್ಪಡುವವು. ತೊಲೆಗಳ ಪಟ್ಟಿಯನ್ನು ಕೊಡಗುಜಿಲ್ಲಾ ಡೆಪ್ಯೂಟಿ ಕನ್ಸರ್ವೇಟರ್, ಮಡಿಕೇರಿ, ಇವರುಗಳಿಗೆ ಬರೆದು ತರಿಸಿಕೊಳ್ಳಬಹುದು.

2. ಪ್ರತಿ ಒಂದು ದರಖಾಸ್ತಿನೊಡನೆ ಒಂದುನೂರು ರೂಪಾಯಿನ ಕರೆನ್ಸಿ ನೋಟನ್ನು ಅಡ್ವಾನ್ಸಾಗಿ ಕಳುಹಿಸತಕ್ಕದ್ದು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತು ಇರುವ ಲಿಫಾಫೆಗಳನ್ನು "ಕೊಡಗು ಫಾರೆಸ್ಟ್ಸ್ ಡೆಪ್ಯೂಟಿ ಕನ್ಸರ್ವೇಟರ್ ಸಾಹೇಬರವರಿಗೆ–ಮಡಿಕೇರಿ" ಎಂದು ವಿಳಾಸ ಬರೆದು ಇಂಪೀರಿಯಲ್ ರಿಜಿಸ್ಟರ್ ಮಾಡಿದ್ದಲ್ಲಿ "ಕರೀಮರ ಕೊಂಡುಕೊಳ್ಳುವ ಬಗ್ಗೆ ದರಖಾಸ್ತು" ಎಂದು ಲಿಫಾಫೆಯ ಮೇಲೆ ಬರೆದಿರಬೇಕು.

3. ತಲಪಿರುವ ದರಖಾಸ್ತುಗಳನ್ನೆಲ್ಲಾ 1903ನೇ ಇಸವಿ ಆಗಸ್ಟ್ಟು 1ನೇ ತಾರೀಖಿನಲ್ಲಿ ವಡಿಯಲ್ಪಡುವವು. ಈ ತಾರೀಖಿನಂತರ ತಲಪುವ ದರಖಾಸ್ತುಗಳನ್ನು ವಡಿಯದೇನೇ ಟಪ್ಪಾಲು ಆಫೀಸಿಗೆ ವಾಪಸು ಕಳುಹಿಸಲ್ಪಡುವವು.

4. ದರಖಾಸ್ತುದಾರನು ಮೇಲ್ಕಂಡ ತೊಲೆಗಳ ಪಟ್ಟಿಯಲ್ಲಿ ಕಾಣುವ ಪ್ರತಿ ಒಂದು ಲಾಟಿಗೆ ಪ್ರತ್ಯೇಕವಾಗಿ ತನ್ನ ದರವನ್ನು ನಮೂದಿಸತಕ್ಕದ್ದು. ದರಖಾಸ್ತುಗಳನ್ನು ಒಂದೊಂದು ಕ್ಯೂಬಿಕ್ ಫೂಟಿಗಾಗಲಿ ಯಾ ಇಂತಿಂಥಾ ತೊಲೆಗಳಿಗೆಂತಾಗಲಿ ಯಾ ಎರಡು ಯಾ ಹೆಚ್ಚು ಲಾಟುಗಳಿಗೆ ಇಷ್ಟು ಒಟ್ಟು ಹಣ ಯೆಂತಾಗಲಿ ಯಾ ಎಲ್ಲಾ ಮರಕ್ಕೆ ಇಷ್ಟೇ ಹಣ ಯೆಂತಾಗಲಿ ಕೇಳಕೂಡದು.

5. ಜಾಸ್ತಿ ದರದ ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲೇಬೇಕೆಂಬುವದಕ್ಕೆ ಡೆಪ್ಯೂಟಿ ಕನ್ಸರ್ವೇಟರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ದರಖಾಸ್ತು ಮಂಜೂರಾತಿಯನ್ನು ಸದರಿ ದರಖಾಸ್ತುದಾರನಿಗೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಅಡ್ವಾನ್ಸನ್ನು ವೊಬಲಗು ಸ್ಟ್ಯಾಂಪು ಹಚ್ಚಿಸಿರುವ ರಸೀತಿಗಳನ್ನು ಹಾಜರು ಮಾಡಿದ ವಡನೆ ಅವರಿಗೆ ವಾಪಸು ಮಾಡಲ್ಪಡುವದು.

6. ಖರೀದಿದಾರನು ದರಖಾಸ್ತು ಮಂಜೂರಾದ ಏಳುದಿವಸಗಳೊಳಗೆ ಅವನಿಗೆ ಕೊಡಲ್ಪಡುವ ಅಡ್ವಾಯಿಸು ವೋರೆ ಖರೀದಿ ವೊಬಲಿನ ದಶಾಂಶವನ್ನು ಕೇವಣಿ ಬಗ್ಯೂ ಬಾಕಿ ಹಣವನ್ನು (ವೊದಲು ಇಟ್ಟ ಅಡ್ವಾನ್ಸು ಹಣ ವಜಾಮಾಡಿ) ಮಂಜೂರಾದ 30 ದಿವಸಗಳೊಳಗೂ ಖಜಾನೆಗೆ ಪಾವತಿ ಮಾಡತಕ್ಕದ್ದು. ಸದರಿ ಎರಡು ವೊಬಲಗುಗಳಲ್ಲಿ ಯಾವದಾದರೂ ಒಂದನ್ನೇ ಆಗಲಿ ಪಾವತಿ ಮಾಡಲು ತಪ್ಪಿದ್ದಲ್ಲಿ ದರಖಾಸ್ತು ರದ್ದುಮಾಡಿ ಅಡ್ವಾನ್ಸು ಹಣ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡು ಮೂರಾವ ಪುನಹ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ವೊದಲನೇ ದರಖಾಸ್ತುದಾರನನ್ನು ಬದ್ಧನನ್ನಾಗಿ ಮಾಡಲ್ಪಡುವದು.

7. ಮೂರಲ್ಪಟ್ಟ ಮರವು ಮಂಜೂರಾದ ತಾರೀಖು ಲಾಗಾಯಿತು ದರಖಾಸ್ತುದಾರನ ಜವಾಬ್ದಾರಿಯಲ್ಲೇ ಇರುವದು. ಆದರೆ ಮರ ಸಾಗಿಸಲು ಪೂರಾ ವೊಬಲಗು ಪಾವತಿ ಮಾಡಿದ್ದಲ್ಲದೆ ಬಿಡಲ್ಪಡುವದಿಲ್ಲಾ.

8. ಖರೀದಿದಾರರು ಅವಶ್ಯವಿದ್ದರೆ ತೊಲೆಗಳನ್ನು ಪುನಹ ಅಳತೆ ಮಾಡಬಹುದು. ಆದರೆ ಮರ ಸಾಗಿಸಿದನಂತರ ಕಂಡುಬರುವ ವ್ಯತ್ಯಾಸಗಳನ್ನಾಗಲಿ ಅಥವಾ ಯಾವ ಸಂಗತಿಯಲ್ಲಾದರೂ ಅಂಥಾ ವ್ಯತ್ಯಾಸಗಳನ್ನ ಕುರಿತು ಸಮಾಧಾನ ಪಡಿಸಿದ್ದಲ್ಲದೆ ಡೆಪ್ಯೂಟಿ ಕನ್ಸರ್ವೇಟರ್ ಸಾಹೇಬರವರು ಒಪ್ಪಿಕೊಳ್ಳಲಿಕ್ಕಿಲ್ಲಾ. ಒಪ್ಪಿಕೊಂಡ ವ್ಯತ್ಯಾಸಗಳಲ್ಲಿ ಹೆಚ್ಚು ಬಂದರೆ ಅದಕ್ಕೆ ಸರಿಯಾಗುವ ವೊಬಲಗು ಕೊಡಲೂ ಯಾ ಕಡಿಮೆ ಬಂದಲ್ಲಿ ವಜಾ ಪಡಿಯಲೂ ದರಖಾಸ್ತುದಾರರು ಅರ್ಹರಾಗುತ್ತಾರೆ.

9. ತಪ್ಪಿಲು ಪಟ್ಟಿಗಳ ಮತ್ತು ಕಡಿಮೆ ವಿಷಯಗಳನ್ನು ಈ ಕಳಿಗೆ ಸೈನ್ ಮಾಡಿರುವವರಿಗೆ ಬರದು ತರಿಸಿಕೊಳ್ಳಬಹುದು.

ಸಿ. ಮೆಕ್ಕಾರ್ಥಿ,
ಕೊಡಗು ಡೆಪ್ಯೂಟಿ ಕನ್ಸರ್ವೇಟರ್, ಮಡಿಕೇರಿ.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರ ಇರೇಬಿಯಲ್ಲಿ ನಮೂದಾಗುವ ಗ್ರಾಮಗಳು ಅದರ ಬಾಜೂದಲ್ಲಿ ನಮೂದಾಗುವ ತಾರೀಖುಗಳಲ್ಲಿ ಕಂದಾಯದ ಬಾಕಿಗೋಸ್ಕರ ಮಾಗಡಿ ತಾಲ್ಲೂಕು ಅಮಲ್ದಾರ್ರವರ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1903ನೇ ಜೂ॥ 25ನೇ ತಾರೀಖಿನ ಮೈಸೂರು ಗೆಜೆಟ್ 2ನೇ ಭಾಗದಲ್ಲಿ ಘಾಯಿಷ್ಮಾಗಿದೆ.

		ಹರಾಜು ತಾರೀಖು.
ಖಾಯಂಗುತ್ತಾ ಬೈಚಗುಪ್ಪೆ	...	27—7—1903.
,, ಗಂಗೇನಹಳ್ಳಿ	...	28—7—1903.
,, ಜೋಡಿ ಚಿಕ್ಕಲೂರು	...	29—7—1903.
,, ಕೊಟಗಾರಹಳ್ಳಿ	...	30—7—1903.

ಹೆಚ್. ಹೆಚ್. ಸ್ಪರ್ಕ್ಸ್,
ಡೆಪ್ಯೂಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಅಬಸ್ಟ್ರಾಕ್ಟ್.

ತಾರೀಖು 19ನೇ ಜೂ॥ 1903.

ಶಿಡ್ಲಘಟ್ಟ ತಾಲ್ಲೂಕು ಸಾದಲಿ ಹೋಬಳಿಗೆ ಶೇರಿದ ದೇವಗಾನಹಳ್ಳಿ, ಕುರಬರಹಳ್ಳಿ, ಗಡಿಮಂಚೇನಹಳ್ಳಿ, ಯರನಾಗೇನಹಳ್ಳಿ, ಗುಂಡಹಳ್ಳಿ ಈ ಗ್ರಾಮಗಳಿಗೆ ಶೇರಿದ ಹಿಡುವಳಿ ಇಲ್ಲದ ಜಮೀನುಗಳನ್ನು ತಾಲ್ಲೂಕ್ ಅಮಲ್ದಾರ್ರವರ ರೂಬರೂಬ್, 1903ನೇ ಇಸವಿ ಜುಲೈ 25, 26, 27, 28, 29, 30 ಈ ತಾರೀಖುಗಳಲ್ಲೂ ಆಯಾಯ ನಂಬರ್‌ಗಳ ಬಳಿ ಬಹಿರಂಗವಾಗಿ ಹರಾಜು ವಜಾಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಯೆ 1903ನೇ ಜೂ॥ ತಾರೀಖು 25ನೇ ಮಾರ್ಕಂ 25ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 331–332–333–334ನೇ ನಂಬರ್ ಪೇಜುಗಳು ನೋಡತಕ್ಕದ್ದು.

ಎಫ್. ಸಿ. ಕಾರ್,
ಡೆಪ್ಯೂಟಿ ಕಮಿಷನರ್.